# ನಿಮ್ಮೊಡನೆ

ಮಹತ್ವಾಕಾಂಕ್ಷೆ, ಹೊಂಗನಸು, ಗುರಿ, ಉದ್ದೇಶ ಇಂಥ ಘನವಾದ ಪದಗಳೊಂದಿಗೆ ಸಾಗಬೇಕಾದ ಯುವಜನಾಂಗದ ಒಂದು ಭಾಗ ಮತ್ತಿನ ಸುಳಿಯಲ್ಲಿ, ಮಾದಕ ದ್ರವ್ಯಗಳ ಜಾಲದಲ್ಲಿ, ಚಟಗಳ ಹುದುಲೊಳಗೆ ಸಿಲುಕಿದ್ದಾರೆ. ಯುವ ಬದುಕಿನ ಸಾಹಸವೊಂದು ಚಟವಾಗಿ ಬದಲಾದರೆ ಬದುಕು ಕತ್ತಲೆಯ ಕೂಪಕ್ಕೆ ಕರೆದೊಯ್ಯುತ್ತದೆ. ಈ ಸುಳಿಯಿಂದ ದೂರ ಇರುವ ಜಾಣ್ಮೆ ಹೇಳಿಕೊಡಬೇಕಿದೆ.


ವಿಜಯ

## ಮಾದಕ ದ್ರವ್ಯಗಳ ಲೋಕದಿಂದಾಚೆ...

ಒಂದೆರಡು ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಮಾದಕದ್ರವ್ಯಗಳ ವ್ಯಸನಕ್ಕೆ ಒಳಗಾದವರ ಸಂಖ್ಯೆ 25 ಕೋಟಿ ಇತ್ತು. ಅದೀಗ ಮೂವತ್ತು ಕೋಟಿವರೆಗೂ ಹೆಚ್ಚಿದೆ ಎಂದು ವಿಶ್ವಸಂಸ್ಥೆಯ ಮಾದಕ ದ್ರವ್ಯಗಳು ಮತ್ತು ಅಪರಾಧ ಕಚೇರಿ (ಯುಎನ್‌ಒಡಿಸಿ) ವರದಿ ಹೇಳುತ್ತಿದೆ.

ಪ್ರತಿವರ್ಷವೂ ಮಾದಕ ವ್ಯಸನಿಗಳ ಸಂಖ್ಯೆಯು ಏರುಗತಿಯಲ್ಲಿಯೇ ಸಾಗಿದೆ. ಒಂದು ಕಾಲಕ್ಕೆ ಡ್ರಗ್ಸ್‌ಗಳೆಂದರೆ ಪಂಜಾಬ್ ರಾಜ್ಯ ಎಂಬಂತೆ ಆಗಿತ್ತು. ಆದರೆ 2024ರಲ್ಲಿ ಅಲ್ಲಿ 9 ಸಾವಿರದಷ್ಟು ಪ್ರಕರಣಗಳು ದಾಖಲಾಗಿವೆ. ಕೇರಳ, ಪಂಜಾಬನ್ನು ಹಿಂದಿಕ್ಕಿ 27 ಸಾವಿರ ಪ್ರಕರಣಗಳನ್ನು ದಾಖಲಿಸಿ, ಮುಂಚೂಣಿಯಲ್ಲಿದೆ. ಮಾದಕ ದ್ರವ್ಯಗಳ ಸ್ವರೂಪ ದಿನಗಳೆದಂತೆ ಬದಲಾಗುತ್ತಿದೆ. ಅತಿ ಹೆಚ್ಚು ನಾಜೂಕಾಗಿ, ತಿಳಿಯದಂತೆ ವೈವಿಧ್ಯಮಯ ಸ್ವರೂಪದಲ್ಲಿ ಯುವಜನಾಂಗಕ್ಕೆ ಪೂರೈಕೆಯಾಗುತ್ತಿರುವುದರಿಂದ ನಿಜದ ಸಂಖ್ಯೆ ಈಗಲೂ ತಿಳಿದುಬರುತ್ತಿಲ್ಲ. ಆದರೆ ಯುವ ಜನಾಂಗದಲ್ಲಿ ಹೆಚ್ಚುತ್ತಿರುವ ಕ್ಯಾನ್ಸರ್, ಶ್ವಾಸಕೋಶ ಸಂಬಂಧಿ ರೋಗಗಳು, ನರವ್ಯೂಹ ಸಂಬಂಧಿ ಸಮಸ್ಯೆಗಳು ನಮ್ಮಲ್ಲಿ ವ್ಯಸನಿಗಳ ಸಂಖ್ಯೆ ಹೆಚ್ಚಾಗುತ್ತಿದೆ ಎನ್ನುವುದಕ್ಕೆ ಪುರಾವೆ ಒದಗಿಸುತ್ತದೆ.

ನಶೆಯ ಆಕರ್ಷಣೆ ಹೆಚ್ಚುತ್ತಿರುವ ಕಾರಣಗಳೂ ವೈವಿಧ್ಯಮಯವಾಗಿವೆ. ಒತ್ತಡದ ಬದುಕು, ವಾರಾಂತ್ಯದ ಮೋಜು, ಯೌವನದಲ್ಲಿ ಹೊಸತೇನೋ ಮಾಡಬೇಕೆಂಬ ಸಾಹಸಿ ಮನೋಭಾವದಲ್ಲಿ ಚಟಕ್ಕೆ ಬಲಿಯಾಗುವವರೇ ಹೆಚ್ಚು. ಹೆತ್ತವರಿಗೆ ಇದೆಲ್ಲ ಗೊತ್ತಾಗಿ, ಡಿ ಅಡಿಕ್ಷನ್ ಕೇಂದ್ರಗಳಿಗೆ ದಾಖಲಿಸುವಾಗ ಪರಿಸ್ಥಿತಿ ಕೈಮೀರಿ ಹೋಗಿರುತ್ತದೆ. ಕರ್ನಾಟಕದಲ್ಲಿಯೂ ಇಂಥ ಕೇಂದ್ರಗಳ ಸಂಖ್ಯೆ ಹೆಚ್ಚುತ್ತಲಿವೆ.

ಒಂದು ಸಮಾಜದಲ್ಲಿ ಹೆಚ್ಚಿನ ಸಂಖ್ಯೆಯ ಪೊಲೀಸ್ ಠಾಣೆಗಳಿದ್ದರೆ, ಹೆಚ್ಚಿನ ಸಂಖ್ಯೆಯಲ್ಲಿ ವ್ಯಸನಮುಕ್ತ ಕೇಂದ್ರಗಳೂ ಇದ್ದರೆ ಅದ್ಹೇಗೆ ಕಲ್ಯಾಣ ರಾಜ್ಯವಾದೀತು? ಚಟದ ದಾಸರಾಗಲು ಜೈವಿಕವಾಗಿ ಆನುವಂಶೀಯ ಗುಣಗಳೂ ಕಾರಣವಾಗುತ್ತವೆ. ಇದನ್ನು ಒಂದು ಬದಿಗಿರಿಸಿದರೆ ಬಹುತೇಕ ಯುವಕ ಯುವತಿಯರಿಗೆ ಸ್ನೇಹಿತರ ಒತ್ತಾಯವೇ ಚಟದ ಮೂಲವಾಗಿರುತ್ತದೆ. ಸಮ ವಯಸ್ಕರ ಈ ಒತ್ತಡಕ್ಕೆ ಒಳಗಾದವರು ಆ ನಶೆಯ ಸುಳಿಯಿಂದಾಚೆ ಬರುವುದಿಲ್ಲ. ಇನ್ನೂ ಕೆಲವರಿಗೆ ವಾರಾಂತ್ಯದಲ್ಲಿ ದುಡಿಮೆಯ ದಣಿವು ಕಳೆದುಕೊಳ್ಳುವ ಸಾಧನವಾಗಿ ಇವು ಕಾಣಿಸಿಕೊಂಡಿರುತ್ತವೆ.

ಹದಿಹರೆಯದ ಮಕ್ಕಳು ಚಟಗಳಿಗೆ, ಇಂಥ ಸುಳಿಗಳಿಗೆ ಸಿಗಲು ಕೌಟುಂಬಿಕ ಭದ್ರತೆ ಸಿಗದೇ ಇರುವುದೇ ಕಾರಣವಾಗಿದೆ. ಅಸುರಕ್ಷೆಯ ಭಾವ, ಕೀಳರಿಮೆ, ಮೇಲರಿಮೆ, ಹೆಚ್ಚು ಹಣದ ಹರಿವು ಇದ್ದರೂ, ಬಡತನದಿಂದಾಗಿ ಹೀಯಾಳಿಕೆಗೆ ಒಳಗಾಗುತ್ತಿದ್ದರೂ ಅಗ್ಗದ ಚಟಗಳಿಗೆ ಬಲಿಯಾಗುತ್ತಿದ್ದಾರೆ. ಜನಜಾಗೃತಿ ಮತ್ತು ಮಾದಕ ವಸ್ತುಗಳು ಸರಳವಾಗಿ ಲಭ್ಯವಾಗದಂತೆ ನೋಡಿಕೊಳ್ಳುವುದೇ ಇದಕ್ಕೆ ಪರಿಹಾರವಾಗಿದೆ.

ಕರ್ನಾಟಕದಲ್ಲಿ ಮಾತ್ರ ಡ್ರಗ್ ಮುಕ್ತ ರಾಜ್ಯವಾಗಿಸಲು ಹೊಸ ಆ್ಯಪ್ ಒಂದನ್ನು ರಾಜ್ಯ ಪೊಲೀಸ್ ಕಂಪ್ಯೂಟರ್ ವಿಂಗ್ ಪರಿಚಯಿಸಿದೆ. ‘ಡ್ರಗ್ ಫ್ರೀ ಕರ್ನಾಟಕ’ ಎಂಬ ಈ ಆ್ಯಪ್ ಅನ್ನು ಈಗಾಗಲೇ ಹತ್ತುಸಾವಿರಕ್ಕೂ ಹೆಚ್ಚು ಜನ ಡೌನ್‌ಲೋಡ್ ಮಾಡಿಕೊಂಡು, ಮಾದಕ ವಸ್ತುಗಳು ದೊರೆಯುತ್ತಿದ್ದಲ್ಲಿ, ಅಂತಹ ಚಟುವಟಿಕೆಗಳು ಕಂಡುಬಂದಲ್ಲಿ ಪೊಲೀಸರಿಗೆ ಈ ಆ್ಯಪ್ ಮೂಲಕ ಮಾಹಿತಿ ನೀಡಬಹುದಾಗಿದೆ.

ಚಟ ನಿರ್ಮೂಲನೆಗೆ ಜನಜಾಗೃತಿಗಿಂತಲೂ ಸ್ವಯಂ ಜಾಗೃತಿ ಅತ್ಯವಶ್ಯವಾಗಿದೆ. ಯಾರ ಒತ್ತಾಯದಿಂದಲೂ ಚಟಗಳಿಂದಾಚೆ ಬರಲು, ಆಚೆ ತರಲು ಸಾಧ್ಯವಾಗುವುದಿಲ್ಲ. ಇರುವುದೊಂದು ಜೀವನ ಆನಂದಿಸಲು, ನರಳಲು ಅಲ್ಲ ಎಂಬ ಜಾಗೃತಿ ಪ್ರತಿ ಯುವಜೀವಕ್ಕೂ ಮನವರಿಕೆ ಮಾಡಿದರೆ ಈ ಚಟಗಳ ಸುಳಿಯಿಂದಾಚೆ ಬರುವ ಮನಸು ಮಾಡುವರು. ಜಾಗೃತಿ ಕಾರ್ಯಾಗಾರಗಳು, ವ್ಯಸನ ಮುಕ್ತರಾಗಲು ಪ್ರೇರಣೆ ನೀಡುವ ಕಥನಗಳ ಪ್ರಸಾರ ಹೆಚ್ಚು ಹೆಚ್ಚಾಗಬೇಕಿದೆ.

ಕಬೀರರ ದೋಹೆ ಒಂದು ಈ ಬಗ್ಗೆ ಪರಿಣಾಮಕಾರಿಯಾಗಿ ಹೇಳಿದೆ. ‘ನೀಂದ್ ನಿಶಾನಿ ಮೌತ್ ಕಿ, ಉಠ್ ಕಬೀರಾ ಜಾಗ್, ಔರ್ ರಸಾಯನ ಛೋಡಿಕೆ, ನಾಮ ರಸಾಯನ ಲಾಗ್’ (ನಿದ್ದೆ ಎಂಬುದು ಸಾವಿನ ಪ್ರತೀಕ, ಜಾಗೃತನಾಗು ಕಬೀರ, ಉಳಿದೆಲ್ಲ ರಸಾಯನಗಳನ್ನು ಬಿಟ್ಟು ನಾಮ ರಸಯಾನಕ್ಕೆ ಹಚ್ಚಿಕೊ) ಎಂದು ಕರೆ ನೀಡುತ್ತಾರೆ. ರಸಾಯನಗಳಿಂದ ಬದುಕು ಹಸನಾಗುವುದಿಲ್ಲ. ಆದರೆ ರಸಯಾನದಿಂದ, ನಾಮ ರಸಾಯನದಿಂದ ಭಕ್ತಿ ಮಾರ್ಗದಲ್ಲಿ, ಶ್ರದ್ಧೆಯಿಂದ ಬದುಕು ಆನಂದಿಸಿದರೆ ಹಸನಾಗುವುದೆಂದು ಕರೆ ನೀಡುತ್ತಾರೆ.

ಚಟಗಳಿಂದ ಹೊರಬರಲು ಪುಸ್ತಕಗಳ ನಶೆ ಆದರೆ, ಅಕ್ಷರ ಪ್ರೀತಿ ಹುಟ್ಟಿದರೆ ಯುವಜನಾಂಗಕ್ಕೆ ಇಂಥ ಸಹಸ್ರ ಜಾಗೃತಿಯ ಧ್ವನಿಗಳು ಕೇಳಿಬರುತ್ತವೆ. ಅಂತರಾತ್ಮವು ಜಾಗೃತ ಸ್ಥಿತಿಗೆ ಬಂದರೆ ಸದೃಢ ಯುವ ಜನಾಂಗ, ಸ್ವಾಸ್ಥ್ಯ ಸಮಾಜ ನಮ್ಮದಾಗುತ್ತದೆ.

■ ರಶ್ಮಿ ಎಸ್